# ಕಲ್ಯಾಣ ಕರ್ನಾಟಕ ಸ್ವಾತಂತ್ರ್ಯ ಹೋರಾಟದ ಮಹಿಳಾಮಣಿಗಳು

**Dr. Shamala S swami**
Assistent professor
Goverment college (Autonomus)
Gulbarga-585 105.

**Article Link: https://aksharasurya.com/2023/07/shamala-s-swami/**

ಭಾರತದ ಸ್ವಾತಂತ್ರ್ಯ ಹೋರಾಟದ ಕಥನವು ವೈವಿಧ್ಯಮಯ ನೆಲೆಯನ್ನು ಹೊಂದಿದೆ. ಒಂದೊಂದು ಪ್ರದೇಶದ ಹೋರಾಟದ ಕಥನವೂ ರೋಚಕವಾಗಿದೆ. ದುರುಳ ಆಂಗ್ಲರ ಹಾಗೂ ಅವರೊಂದಿಗೆ ಕೈಜೋಡಿಸಿದ ಕೆಲವು ಸ್ಥಳೀಯ ಅರಸರುಗಳ ವಿರುದ್ಧ ನಡೆದ ಸ್ವಾಭಿಮಾನಿ ಹೋರಾಟಗಳು ಮೈನವಿರೇಳಿಸುತ್ತವೆ. ಅದರಲ್ಲೂ ಭಾರತದ ಸ್ವಾತಂತ್ರ್ಯದ ನಂತರ ಸರಿ ಸುಮಾರು ಒಂದು ವರ್ಷದ ನಂತರ ಸ್ವಾತಂತ್ರ್ಯ ಪಡೆದ ಹೈದರಾಬಾದ್ ಕರ್ನಾಟಕ ಈಗಿನ ಕಲ್ಯಾಣ ಕರ್ನಾಟಕದಲ್ಲಿ ಪರಕೀಯ ಆಡಳಿತದ ಮುಕ್ತಿಗಾಗಿ ನಡೆದ ಚಳವಳಿಯು ಇನ್ನೂ ಭಿನ್ನ ಸ್ವರೂಪದಲ್ಲಿತ್ತು. ಹನ್ನೆರಡನೆಯ ಶತಮಾನದ ಶಿವಶರಣರಿಂದ ಸ್ವಾಭಿಮಾನಿ ಚಳವಳಿಯ ಪ್ರೇರಣೆ ಪಡೆದ ಈ ಭಾಗದ ಸ್ವಾತಂತ್ರ್ಯ ಹೋರಾಟದಲ್ಲಿ ಕೇವಲ ಪುರುಷರು ಮಾತ್ರವಲ್ಲದೆ, ಮಹಿಳೆಯರೂ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಅಂತಹ ಮಹಿಳಾಮಣಿಗಳ ರೋಚಕ ಹೋರಾಟದ ಕಥನವನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಾಗಿದೆ.

ನಾವು ಚಿಕ್ಕವರಿದ್ದಾಗ ನಮ್ಮ ಅಜ್ಜಿ ನಮ್ಮ ಸೋದರತ್ತೆ ಅಜ್ಜ ನಮಗೆ ರಜಾಕಾರ ಹಾವಳಿಗಳ ಕುರಿತು ಕಥೆ ಹೇಳುತ್ತಿದ್ದರು. 'ರಜಾಕಾರರು ಧರ್ಮ ದ್ವೇಷ ಅತ್ಯಾಚಾರ ಅನಾಚಾರಗಳನ್ನು ಮಾಡುತ್ತಿದ್ದರು' ಎಂದು ನಮ್ಮ ಹಿರಿಯರು ಹೇಳಿದ ನೆನಪು. 1947 ಅಗಸ್ಟ್ 15 ರಂದು ಭಾರತ ಸ್ವತಂತ್ರವಾಯಿತು. ಆದರೆ ಭಾರತದೊಡನೆ ವಿಲೀನವಾಗಲು ವಿರೋಧಿಸಿದ ಹೈದರಾಬಾದಿನ ನಿಜಾಮರು ಮೀರ್ ಉಸ್ಮಾನ್–ಅಲಿ–ಡೆಕ್ಕನ್ ರೇಡಿಯೋ ಅಥವಾ ನಿಜಾಮ್ ರೇಡಿಯೋ ಮೂಲಕ ಹೈದರಾಬಾದ್ ಸಂಸ್ಥಾನವನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿದ.

ಭಾರತದೊಡನೆ ವಿಲೀನಗೊಳ್ಳುವ ಉದ್ದೇಶದಿಂದ ಹೈದರಾಬಾದ ಪ್ರಜೆಗಳು ಗಾಂಧೀ ಪ್ರಣೀತ ಅಹಿಂಸಾತ್ಮಕ ಚಳುವಳಿ ಪ್ರಾರಂಭಿಸಿದ್ದರು. ಇದರ ನೇತೃತ್ವವನ್ನು ಸಂಸ್ಥಾನ ಕಾಂಗ್ರೆಸ್ ಮುಖಂಡರಾದ ಸ್ವಾಮಿ ರಾಮಾನಂದ ತೀರ್ಥರು ವಹಿಸಿದ್ದರು.

ಈ ಚಳುವಳಿಯನ್ನು ಹತ್ತಿಕ್ಕಲು ನಿಜಾಮನು ತನ್ನ ಪೋಲೀಸ್ ಬಲವನ್ನು ಅತ್ಯಂತ ಕ್ರೂರವಾಗಿ ಉಪಯೋಗಿಸಿದನು. ಇದಲ್ಲದೆ, ತನ್ನ ವಿರೋಧಿಗಳನ್ನು ಸಂಪೂರ್ಣವಾಗಿ ನಾಶ ಮಾಡಲು ಕಾಸಿಂ ರಜವಿ ಎಂಬ ಭಯೋತ್ಪಾದಕನ ನೇತೃತ್ವದಲ್ಲಿ ರಜಾಕಾರ (ರಜಾಕಾರ ಎನ್ನುವದು ಪರ್ಶಿಯನ್ ಭಾಷೆಯ ಪದ ಮತ್ತು ಇದರ ಅರ್ಥ ಸ್ವಯಂಸೇವಕ) ಹೆಸರಿನ ಭಯೋತ್ಪಾದಕರ ಪಡೆಯನ್ನು ಕೂಡಾ ನಿಸ್ಸಹಾಯಕ ಪ್ರಜೆಗಳ ಮೇಲೆ ದಾಳಿಗಿಳಿಸಿದನು. ಕಾಸಿಂ ರಜ್ವಿ ಈಗ ಮಹಾರಾಷ್ಟ್ರ ರಾಜ್ಯದಲ್ಲಿರುವ ಲಾತೂರಿನಲ್ಲಿ ಒಬ್ಬ ಮಾಮೂಲಿ ವಕೀಲನಾಗಿದ್ದ. ಈತ ಉಗ್ರವಾದಿ ಸಂಘಟನೆ 'ಇತಿಹಾದುಲ್ ಮುಸಲ್ಮಾನ್'ದ ಅಧ್ಯಕ್ಷನಾಗಿದ್ದ ಕೂಡಾ. ನಿಜಾಮನು ಹೈದರಾಬಾದ ಸಂಸ್ಥಾನವನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿದ ದಿನದಂದು, ಈ ರಜಾಕಾರರು, ವಿಶೇಷವಾಗಿ ಹೈದರಾಬಾದಿನಲ್ಲಿ ಸಾವಿರಾರು ಜನ ಅಮಾಯಕರ ಮೇಲೆ ದಾಳಿಯಿಟ್ಟು ಲೂಟಿ, ಅತ್ಯಾಚಾರ, ದೌರ್ಜನ್ಯ ನೆಡೆಸಿದರು. ಇಂದಿನ ತೆಲಂಗಾಣ ಪ್ರದೇಶ, ದಕ್ಷಿಣ ಮಹಾರಾಷ್ಟ್ರ ಮತ್ತು ಹೊಸಪೇಟೆಯ ಬಳಿಯಿರುವ ತುಂಗಭದ್ರಾ ತೀರದವರೆಗೆ ವಿಸ್ತರಿಸಿದ್ದ ಹೈದರಾಬಾದ ಸಂಸ್ಥಾನದ ಜನ, 18 ಸೆಪ್ಟೆಂಬರ್ 1948 ಸಂಜೆ ಆರು ಗಂಟೆಯವರೆಗೆ ನಿರಂತರವಾಗಿ ಹಿಂಸೆ, ಕೊಲೆ, ಸುಲಿಗೆ ಮತ್ತು ದೌರ್ಜನ್ಯಕ್ಕೆ ಸಿಲುಕಿದರೂ, ಭಾರತದೊಡನೆ ಹೈದರಾಬಾದ ಸಂಸ್ಥಾನದ ವಿಲೀನಕ್ಕಾಗಿ ಹೋರಾಡಿದರು.

ಗ್ರಾಮಗಳಲ್ಲಿರುವ ಹಿಂದು ಸಮುದಾಯದ ಮೇಲೆ ದಾಳಿ ಮಾಡಿ ಜಮೀನುಗಳಲ್ಲಿಯ ಬೆಳೆ ನಾಶ ಮಾಡುವದು, ಮನೆಗಳನ್ನು ಹಾಗು ದೇವಸ್ಥಾನಗಳನ್ನು ಲೂಟಿ ಮಾಡುವದು, ಹೆಂಗಸರ ಮೇಲೆ ಅತ್ಯಾಚಾರಗೈದು ವಿರೂಪಗೊಳಿಸುವದು, ಮಕ್ಕಳು ಮುದುಕರೆನ್ನದೆ ಕಂಡವರನ್ನೆಲ್ಲ ಕತ್ತಿ, ಕೊಡಲಿ, ಬಂದೂಕುಗಳಿಂದ ಹಿಂಸಿಸಿ ಕೊಲ್ಲುವದು, ರಾಷ್ಟ್ರೀಯ ವಿದ್ಯಾಲಯಗಳ ಮೇಲೆ ದಾಳಿ ಮಾಡುವದು ಇವೆಲ್ಲ ಪ್ರಜಾ ಚಳುವಳಿಯನ್ನು ಹತ್ತಿಕ್ಕಲು ರಜಾಕಾರರು ಕಂಡುಕೊಂಡ ತಂತ್ರಗಗಳು. 1946–48ರ ನಡುವೆ ರಜಾಕಾರರು ನಡೆಯಿಸಿದ ದೌರ್ಜನ್ಯಗಳ ಅಂಕಿ ಅಂಶಗಳು ಇಂತಿವೆ:

1. ಕಲಬುರ್ಗಿ ಜಿಲ್ಲೆಯಲ್ಲಿ 87 ಗ್ರಾಮಗಳ ಮೇಲೆ ದಾಳಿ, 42 ಕೊಲೆ, 36 ದರೋಡೆ ಹಾಗು 34 ಮಹಿಳೆಯರ ಮೇಲೆ ದೌರ್ಜನ್ಯ.
2. ಬೀದರ ಜಿಲ್ಲೆಯಲ್ಲಿ 176 ಗ್ರಾಮಗಳ ಮೇಲೆ ದಾಳಿ, 120 ಕೊಲೆ, 23 ಮಹಿಳೆಯರ ಮೇಲೆ ದೌರ್ಜನ್ಯ.

3. ರಾಯಚೂರು ಜಿಲ್ಲೆಯಲ್ಲಿ 94 ಗ್ರಾಮಗಳ ಮೇಲೆ ದಾಳಿ, 25 ಕೊಲೆ, 63 ಮಹಿಳೆಯರ ಮೇಲೆ ದೌರ್ಜನ್ಯ.

'ಕಾಟೊ, ಲೂಟೊ ಔರ ಬಾಟೊ' ಎನ್ನುವದು ರಜಾಕಾರರಿಗೆ ಕಾಶೀಮ ರಜ್ವಿಯ ಆದೇಶವಾಗಿತ್ತು.

ಈ ಸಂದರ್ಭದಲ್ಲಿ ರಾಮಚಂದ್ರ ವೀರಪ್ಪ ಎನ್ನುವವರ ಸಾಹಸದ ಕೃತ್ಯವೊಂದನ್ನು ಇಲ್ಲಿ ನೆನೆಯಬೇಕು. ಹುಮನಾಬಾದದಲ್ಲಿಯ ಬಸವೇಶ್ವರ ಗುಡಿಗೆ ಹೋಗಿ ಪೂಜೆ ಮುಗಿಸಿಕೊಂಡು ಬರುತ್ತಿದ್ದ ಮಾನಿನಿಯೊಬ್ಬಳನ್ನು ನೋಡಿದ ರಜಾಕಾರರು ನಡುಬೀದಿಯಲ್ಲಿಯೇ ಅವಳ ಮಾನಹರಣಕ್ಕೆ ಮುಂದಾದರು. ಈ ಸಮಯದಲ್ಲಿ ಅಲ್ಲಿ ಹೋಗುತ್ತಿದ್ದ ರಾಮಚಂದ್ರ ವೀರಪ್ಪ ಎನ್ನುವ ತರುಣ ಜೀವದ ಹಂಗು ತೊರೆದು ಅವಳನ್ನು ರಕ್ಷಿಸಿದ. ಇವನನ್ನು ಸಾಹಿಹೊಡೆದು ರಜಾಕಾರರು ಅಲ್ಲಿಂದ ತೆರಳಿದರು. ಆದರೆ ರಾಮಚಂದ್ರ ಬದುಕುಳಿದ ಹಾಗು ಸ್ವತಂತ್ರ ಭಾರತದಲ್ಲಿ ಲೋಕಸಭೆಗೆ ತನ್ನ ಜೀವಿತಾವಧಿವರೆಗೂ ಸದಸ್ಯರಾಗಿ ಚುನಾಯಿತರಾಗುತ್ತಿದ್ದರು.

ಈ ವಿಮೋಚನೆಯಲ್ಲಿ ಕೇವಲ ಪುರುಷರಷ್ಟೇ ಅಲ್ಲ ಮಹಿಳೆಯರು ಕೂಡ ಹೋರಾಟ ಮಾಡಿದ್ದಾರೆ ಅವರ ಪತಿಯ ಜೊತೆ ನಿಂತು ತಾವು ಕೂಡ ವಿಮೋಚನೆಯಲ್ಲಿ ಹೋರಾಡಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ. ಅಷ್ಟೇ ಅಲ್ಲ ತಮ್ಮ ಮಾನವನ್ನು ಕೂಡ ಕಳೆದುಕೊಂಡಿದ್ದಾರೆ. ಎಷ್ಟು ಜನ ಹೆಣ್ಣು ಮಕ್ಕಳು ತಮ್ಮ ಅಶ್ಲೀಲದ ರಕ್ಷಣೆಗೋಸ್ಕರ ತಮ್ಮನ್ನು ತಾವೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

**ವಿಮೋಚನೆ ಸಲುವಾಗಿ ಹೋರಾಡಿದ ಮಹಿಳೆಯರು**

**1) ಶ್ರೀಮತಿ ಶಾಂತಬಾಯಿ ದುಬೆ:**

ಬಸವಕಲ್ಯಾಣದಲ್ಲಿ ಹುಟ್ಟಿದವರು ಹಳ್ಳಿಖೇಡ ದಲ್ಲಿಯ ಆರ್ಯಸಮಾಜ ಮಹಿಳಾ ವಿಭಾಗದ ಕಾರ್ಯಕರ್ತರಾಗಿದ್ದರು ಬಹಳ ದಿನಗಳವರೆಗೆ ಮಹಿಳಾ ಮಂಡಳದ ಅಧ್ಯಕ್ಷೆ ಆಗಿ ಕೆಲಸ ಮಾಡಿದರು. ಶ್ರೀಮತಿ ಶಾಂತಾಬಾಯಿ ಅವರ ಅತಿ ಸುಂದರ ಪ್ರಸಾದ ದುಬೆ ಹಳ್ಳಿಖೇಡ್ ಆರ್ಯಸಮಾಜದ ಸದಸ್ಯರಾಗಿದ್ದರು. ಅವರು ಆರ್ಯ ಸಮಾಜದ ಅನೇಕ ಕಾರ್ಯಗಳನ್ನು ಸ್ಫೂರ್ತಿಯಿಂದ ನೆರವೇರಿಸಿದವರು 1948 ನಿಜಾಮ್ ರಾಜ್ಯದಲ್ಲಿ ಗದ್ದಲದಾಗ ಅವರು ಬಿಜಾಪುರಕ್ಕೆ ಹೋದರು ಅಲ್ಲಿ ಕಾಂಗ್ರೆಸ್ ನಾಯಕರ ಸಲಹೆ ಮೇರೆಗೆ 2 ಶಿಬಿರ ಪ್ರಾರಂಭ ಮಾಡಿದರು. ಒಂದು ತಾಜ್ ಬಾವಡಿ ಇನ್ನೊಂದು ಇಬ್ರಾಹಿಂ ರೋಜಾ ಇವುಗಳಲ್ಲಿ ಶಿಬಿರಾರ್ಥಿಗಳಿಗೆ

ಆಶ್ರಯ ನೀಡುತ್ತಿದ್ದರು. ವಿಲೀನದ ನಂತರ ಊರಿಗೆ ವಾಪಸಾದರು.

**2) ವಿಮಲಾಬಾಯಿ ಜೋಶಿ**

ವಿಮಲಾಬಾಯಿ ಜೋಶಿ ಗೋರ್ಟಾ ದಲ್ಲಿ ವೀರ ಸೊಸೆ. ಈ ವೀರವನಿತೆ ಬಗ್ಗೆ ಬರೆಯುವಾಗ ಕಣ್ಣ ಮಂಜಾಗುತ್ತವೆ. ಗುಡ್ಡ ಹತ್ಯಾಕಾಂಡದಲ್ಲಿ ವೀರಗತಿ ಪಡೆದವರ ಬಗ್ಗೆ ಬರೆದಾಗ ದುಃಖ ಮತ್ತು ಸಿಟ್ಟು ಬರುತ್ತಿತ್ತು ಆದರೆ ವೀರ ಸಹೋದರಿ ವಿಮಲಾಬಾಯಿ ಜೋಶಿ ಅವರ ಬಗ್ಗೆ ಬರೆಯುವಾಗ ಕಣ್ಣು ತೇವಗೊಂಡವು ಅದೇ ವೇಳೆ ಆಕೆಯ ಬಗ್ಗೆ ಹೆಮ್ಮೆ ಕೂಡ ಉಕ್ಕಿಬಂತು ಪತಿ ರಾಮಭಟ್ಟರು ಊರಲ್ಲಿ ಇರಲಿಲ್ಲ. ರಜಾಕಾರರ ದೊಂಬಿ ಕೇಳಿ ವಿಮಲಾಬಾಯಿ ಬಾಗಿಲು ಹಾಕಿಕೊಂಡು ಒಳಗೆ ಇದ್ದಳು. ರಾಕ್ಷಸರು "ಬೊಮ್ಮನ್ ಕಾಟೋ ಬನ್ನಿ ಯಾಕೋ ಮಾಟೊ" ಎನ್ನುತ್ತಾ ರಾಮಭಟ್ಟರ ಮನೆಗೆ ನುಗ್ಗಿದರು. ಬಾಗಿಲು ಲಾಳ ಗುಂಡೆ ಹಾಕಿದ್ದು ತೆಗೆಯುವುದು ಆಗಲಿಲ್ಲ ಅಷ್ಟೊತ್ತಿಗೆ ವಿಮಲಾಬಾಯಿ ಮಾಳಿಗೆ ಮೇಲೆ ಏರಿದ್ದರಿಂದ ರಜಾಕಾರರು ಒಬ್ಬ ಮೇಲೆ ಒಬ್ಬರು ನಿಂತು ಮೇಲೆ ಬರುವ ಯತ್ನ ನಡೆಸಿದರು ಇದನ್ನು ನೋಡಿದ ವಿಮಲಾಬಾಯಿ ಅಲ್ಲಿದ್ದ ಕಲ್ಲುಗಳನ್ನು ಅವರ ತಲೆಗೆ ಅಪ್ಪಳಿಸಿದರೆ ಅಲ್ಲಾರೆ ಎಂದು ಒಬ್ಬ ಬಿದ್ದ. ಇನ್ನು ತಾನು ಉಳಿಯುವುದಿಲ್ಲವೆಂದು ಇನ್ನೊಂದು ಕಲ್ಲು ಎತ್ತಿ ಹಾಕುವಾಗ ಪಠಾಣ್ ನೋಡಿದ ಆಕೆಯ ಕಲ್ಲು ಕೆಳಗೆ ಒಬ್ಬನ ಹುಬ್ಬಿನ ಮೇಲೆ ಬಡಿಯಿತು ಆಗ ಪಠಾಣ್ ಹಾರಿಸಿದ ಗುಂಡು ಆಕೆ ಎದೆ ತಿಳಿತು.

**3) ಶ್ರೀಮತಿ ತುಳಸಾಬಾಯಿ**

ಶ್ರೀಮತಿ ತುಳಸಾಬಾಯಿ ಗುಲ್ಬರ್ಗದಲ್ಲಿ ಜನಿಸಿದವರು. ಒಬ್ಬ ರಾಷ್ಟ್ರಾಭಿಮಾನಿ ಮಹಿಳೆ. ತನ್ನ ಪತಿ ದಶರಥಸಾ ಸಂಗಡ ಹೈದರಾಬಾದಿನ ಮುಕ್ತಿ ಸಂಗ್ರಾಮದಲ್ಲಿ ಅರ್ಧಾಂಗಿನಿ ಯಾಗಿ ಭಾಗವಹಿಸಿದ್ದರು. 1936 ರಲ್ಲಿ ಅವರು ಆರ್ಯಸಮಾಜದ ಕಾರ್ಯಕರ್ತರ ಸಂಗಡ ಆಂದೋಲನದಲ್ಲಿ ಭಾಗವಹಿಸಿದರು. ತುಳಜಾ ಬಾಯಿಯವರು ವೀರರಮಣಿಯರಂತೆ ಕಾರ್ಯ ಮಾಡಿದರು. ಇದನ್ನು ಕಂಡ ನಿಜಾಂ ಸರ್ಕಾರ ಅವರನ್ನು ಜೈಲಿನಲ್ಲಿ ಇರಿಸಿದ್ದರು. ಭಯಭೀತರನ್ನಾಗಿ ಮಾಡಬೇಕೆಂದು ಅವರನ್ನು ಒಂದು ಜೈಲಿನಿಂದ ಇನ್ನೊಂದು ಜೈಲಿಗೆ ಬದಲಾಯಿಸಿದರು. ಆದರೆ ತುಳಸಾಬಾಯಿ ಧೃತಿಗೆಡಲಿಲ್ಲ. ತುಳಸಾಬಾಯಿ ಅವರು ಪತಿ ದಶರಥಸಾ ಅವರ ಆಂದೋಲನದಲ್ಲಿ ಇದ್ದಾಗ ಅವರಿಗೆ ಬೆಂಬಲವಾಗಿ ನಿಂತರು. ರಜಾಕಾರರು ಬಹಳ ತ್ರಾಸ ಕೊಡಲಾರಂಭಿಸಿದಾಗ ಸೋಲಾಪುರಕ್ಕೆ ಹೋದರು. ದಶರಥಸಾ ರವರು ಮೈದರ್ಗಿ ಕ್ಯಾಂಪಿನಲ್ಲಿ ಸೇರಿಕೊಂಡರು ಅಲ್ಲಿ ನಿಜಾಮನ ಆಸ್ತಿಗೆ ಹಾನಿ ಉಂಟು

ಮಾಡುತ್ತಿದ್ದರು.

**4) ಶ್ರೀಮತಿ ಅಂಬವ್ವ ಬಣಮಗಿ**

ಅಂಬವ್ವ ಬಣಮಗಿ ಹುತಾತ್ಮ ಕಾಶಿ ರಾಯರ ಧರ್ಮಪತ್ನಿ ಕಾಶಿರಾಯ ಅವರು 1948ರಲ್ಲಿ ನಿಜಾಮನ ಬಲಾತ್ಕಾರದ ವಿರುದ್ಧ ದಂಗೆಯೆದ್ದ ಒಬ್ಬ ಮಹಾನ್ ಕ್ರಾಂತಿಕಾರಿ. ಆದರೆ ಸಮಾಜ ಸಂಪರ್ಕ ಪಡೆದು ಹೈದರಾಬಾದ್ ಆಂದೋಲನದಲ್ಲಿ ದುಮುಕಿದರು. ಆಗ ಪತಿಗೆ ಪ್ರೋತ್ಸಾಹ ನೀಡಿದ ವೀರಮಹಿಳೆ ಅಂಬವ್ವ ಬೆಳಮಗಿ. ಕಾಶಿರಾಯ ಕೂಡ ಉತ್ತಮ ಸಂಘಟನೆ ಕಾರ ನಾಗಿದ್ದ ಆಂದೋಲನದಲ್ಲಿ ತರುಣರನ್ನು ಸಂಘಟಿಸಿ ನಿಜಾಮನ ವಿರುದ್ಧ ಹೋರಾಟ ನಡೆಸಿದ. ಅಲ್ಲಲ್ಲಿ ಬೆಂಕಿ ಹಚ್ಚಿದರು. ಇದು ನಿಜಾಮನ ಪಠಾಣರಿಗೆ ಮತ್ತು ರಜಾಕಾರರಿಗೆ ತಲೆನೋವು ಆಯಿತು. ಆಗವರು ಕಾಶಿ ರಾಯರನ್ನು ಗುರಿಯಿಟ್ಟುಕೊಂಡು ಗುಂಡು ಹಾರಿಸಿ ಹತ್ಯೆ ಮಾಡಿದರು. ವೀರಯೋಧನ ಶವಸಂಸ್ಕಾರ ಊರ ಜನರು ಹೆಮ್ಮೆಯಿಂದ ನೆರವೇರಿಸಿದರು.

**5) ಶ್ರೀಮತಿ ಮನೋರಮಾ (ಗಂಡ ಸುರಸೇನ ಹಣಮಪ್ಪ )**

ಶ್ರೀಮತಿ ಮನೋರಮಾ ತನ್ನ ಪತಿ ಸುರಸೇನ ಹನುಮಪ್ಪನಿಗೆ ದೇಶಸೇವೆ ಮಾಡುವುದಕ್ಕೆ ಪ್ರೇರಣೆ ನೀಡಿದ ವೀರಮಹಿಳೆ ಆತನಿಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ನಾನು ಸ್ವಂತ ಆತನ ಸಂಗಡ ಹೋಗಿ ಬಿಟ್ಟು ಬರುತ್ತಿದ್ದಳು.

ಶೂರಸೇನ ಹಣಮಪ್ಪ ಆರ್ಯ ಸಮಾಜದ ಉತ್ಸಾಹಿ ಕಾರ್ಯಕರ್ತರಾಗಿದ್ದರು. ಗುಲ್ಬರ್ಗದಲ್ಲಿ ಆದ ಮೊದಲ ಆರ್ಯ ಸಮಾಜದ ಸಮ್ಮೇಳನದಲ್ಲಿ ಹಣಮಪ್ಪ ಭಾಗವಹಿಸುತ್ತಿದ್ದರು. ಆಗ ಶ್ರೀಮತಿ ಮನೋರಮ ಕೂಡ ಪತಿ ಸಂಗಡ ಭಾಗವಹಿಸಿದ್ದರು ಸಮ್ಮೇಳನದಲ್ಲಿ ಬಂದ ಅತಿಥಿಗಳಿಗೆ ನೀರು ಒದಗಿಸುವ ಕೆಲಸ ಇಬ್ಬರು ಮಾಡಿದರು. ಎರಡನೇ ಸಮ್ಮೇಳನ 1944–45 ನಡೆದಾಗ ಹಣಮಪ್ಪನವ–ರಿಗೆ ಸಮ್ಮೇಳನದಲ್ಲಿ ಭಾಗವಹಿಸಿದ ಮಹಿಳೆಯರಿಗೆ ಅವರವರ ಮನೆಗಳಿಗೆ ಹೊಣೆ ಕೊಡಲಾಗಿತ್ತು ಹನುಮಪ್ಪನವರಿಗೆ ಅವರ ಸೇವೆಯನ್ನು ಗುರುತಿಸಿ ತಾಮ್ರಪತ್ರ ಕೊಟ್ಟು ಸನ್ಮಾನಿಸಲಾಗಿತ್ತು.

**6) ದಾನಾಬಾಯಿ ಡೋಂಗುರು ನಾಯಕ್**

ದಾದಾಬಾಯಿ ಹುಟ್ಟಿದ್ದು ಗುಲ್ಬರ್ಗದಲ್ಲಿ 1947–48 ರಲ್ಲಿ ಇಂಥ ಸಮಯವಿತ್ತು ಗಂಡು–ಹೆಣ್ಣು ತಮ್ಮ ಜೀವದ ಹಂಗುತೊರೆದು ನಿಜಾಮ ಸರಕಾರದ

ವಿರುದ್ಧ ಹೋರಾಡುವುದು ಆಗಿತ್ತು. ಅದರ ಒಂದು ಉದಾಹರಣೆ ದಾನ ಬಾಯಿ ರಜಾಕಾರರ ಚಲನವಲನಗಳನ್ನು ದುದಿನಿ ಮೈದರ್ಗಿ ಕ್ಯಾಂಪುಗಳಿಗೆ ಮುಟ್ಟಿಸುವ ಪತ್ತೇದಾರಿಕೆ ಕೆಲಸ ಮಾಡುತ್ತಿದ್ದರು. ಈ ಕೆಲಸವನ್ನು ಗುಲ್ಬರ್ಗ ಸ್ಟೇಷನ್ನಿಂದ ಕಾಯಿಪಲ್ಯ ಬುಟ್ಟಿಯಲ್ಲಿ ಹಾಕಿಕೊಂಡು ಮಾರುವಂತೆ ಹೋಗುತ್ತಿದ್ದಳು. ಒಂದು ದಿನ ಮುಂಚೆ ಎಲ್ಲ ಸುದ್ದಿ ಸಂಗ್ರಹ ಮಾಡಿಕೊಂಡು ಇರುತ್ತಿದ್ದಳು. ಈ ರೀತಿ ಮಾಡುತ್ತಿರುವಾಗ ಒಬ್ಬ ರಜಾಕಾರ ಅವಳ ಹಿಂದೆ ಗುಪ್ತವಾಗಿ ಹೋದ ದುದನಿಯಲ್ಲಿ ಹೇಳಿದಾಗ ಆತನು ಇಳಿದ. ಕ್ಯಾಂಪಿಗೆ ಹೋಗುವುದು ನೋಡಿದ ಇದು ಜಾ–ರಿಯಾದ ದಾದಾ ಬಾಯಿಗೆ ರಜಾಕಾರರು ತಮ್ಮನ್ನು ಅನುಸರಿಸುತ್ತಿರುವುದು ಬಗ್ಗೆ ಸಂಶಯ ಬಂತು ಆಗವರು ಆತನಿಗೆ ಸಂಶಯ ಬರೆದ ಹಾಗೆ ಸ್ಟೇಷನ್ಗೆ ವಾಪಸ್ ಬಂದು ಬಿಟ್ಟರು.

ಒಟ್ಟಾರೆಯಾಗಿ ಕಲ್ಯಾಣ ಕರ್ನಾಟಕದ ಮಹಿಳೆಯರು ಹೈದರಾಬಾದ್ ನಿಜಾಮ್‌ಶಾಹಿ ದೌರ್ಜನ್ಯ ಅಟ್ಟಹಾಸಗಳ ವಿರುದ್ಧ ಮೈಸೆಟೆದು ನಿಂತು ಹೋರಾಡಿದರು. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬಂತೆ ಪ್ರಾಚೀನ ಕಾಲದಿಂದಲೂ ಅಧ್ಯಾತ್ಮಿಕ, ಧಾರ್ಮಿಕ ಹಾಗೂ ಸಾಮಾಜಿಕ ವಿಚಾರಗಳಲ್ಲಿ ಮಾತ್ರವಲ್ಲದೆ ನಾಡು–ನುಡಿಯ ರಕ್ಷಣೆಂತಹ ಮಹತ್ವದ ಸಂದರ್ಭಗಳ್ಲಿಯೂ ಈ ಭಾಗದ ಮಹಿಳೆಯರು ಪುರುಷನಿಗೆ ಹೆಗಲೆಣೆಯಾಗಿ ದುಡಿದಿದ್ದಾರೆ. ಇಂತಹ ಮಹಿಳಾಮಣಿಗಳ ಹೋರಾಟದ ಕಥನಗಳು ಸ್ಫೂರ್ತಿದಾಯಕವಾಗಿದ್ದು, ಮುಂದಿನ ತಲೆಮಾರಿಗೆ ಪರಿಚಯಿಸಬೇಕಾದುದು ನಮ್ಮ ಜವಾಬ್ದಾರಿಯಾಗಿದೆ.

**ಆಕರ ಕೃತಿಗಳು:**

1. ಅಮರೇಶ ತ್ರಿಪಾಠಿ, ಸ್ವಾತಂತ್ರ್ಯದ ಹೋರಾಟ, ನ್ಯಾಶನಲ್ ಬುಕ್‌ಟ್ರಸ್ಟ್, ಇಂಡಿಯಾ, ಹೊಸದೆಹಲಿ, 2001.
2. ಸದಾಶಿವ ಕೆ., ಭಾರತದ ಸ್ವಾತಂತ್ರ್ಯ ಹೋರಾಟ, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, 2008.
3. ಸೂರ್ಯನಾಥ ಯು. ಕಾಮತ್, ಕರ್ನಾಟಕ ರಾಜ್ಯ ಗೆಜೆಟಿಯರ್, ಕಲಬುರಗಿ ಜಿಲ್ಲೆ.